ಮಾವನಿಗೆ ಮದುವೆ ಮಾಡಿಕೊಟ್ಟಿದ್ದ ಶ್ರೀದೇವಿಗೆ ದೊಡ್ಡಕ್ಯಾದ ಮಗಳಿದ್ದಳು! ತನ್ನ ಕೊನೆಯ ಅಣ್ಣನಿಗೆ ಮಗಳು ವಿಶಾಲಾಕ್ಷಿಯನ್ನು ಕೊಟ್ಟು ತವರಿನ ಕಳ್ಳುಬಳ್ಳಿಯನ್ನ ಜತನ ಮಾಡಿಕೊಳ್ಳಬೇಕೆಂಬ ಲೆಕ್ಕಾಚಾರವಿತ್ತು. ಆದರೆ, ಅಣ್ಣನಿಗೆ ಮನಿದೇವ್ರು ಯಲ್ಲಮ್ಮ ವಲ್ತು ಕಾಡಾಕ ಚಾಲುವಾಗಿ 'ಜೋಗಮ್ಮ' ಆಗುತ್ತಿರುವುದನ್ನ ನೋಡಿ ಅಳಬೇಕೊ? ಕಾಡುತ್ತಿರುವ ಮನೆದೇವ್ರು ಯಲ್ಲಮ್ಮನಿಗೆ ಬೈಯ್ದು ಶಾಪ ಹಾಕಬೇಕೊ ತಿಳಿಯದೆ ಗೊಂದಲಕ್ಕೆ ಸಿಲುಕಿದ್ದಳು.

ಮೊದ ಮೊದಲು ಮನೆಯಲ್ಲಿ ಎಲ್ಲರೂ ಎದೆ ಒಡೆದಿದ್ದರು. ಆದರೆ, ಕ್ರಮೇಣ ಯಲ್ಲವ್ವ ತಾಯಿ ಅವನನ್ನ ಬಿಡದೆ ತೆಕ್ಕೆಗೆ ತಗೊಂಡು ತನ್ನ ಉಡಿಯಲ್ಲಿ ಹಾಕಿಕೊಂಡಾಳ ಅನಿಸಿದ ದಿನ ಅವನ ಪಾಡಿಗೆ ಅವನನ್ನ ಬಿಟ್ಟಿದ್ದರು.

ಮೆರವಣಿಗೆಯನ್ನು ಬಿಟ್ಟ ಕಣ್ಣಿಂದ ನೋಡುತ್ತ ನಿಂತ ವಾದಿರಾಜನಿಗೆ ಇದೆಲ್ಲ ಹೊಸತು ಅನಿಸಲಿಲ್ಲ!

ಹೀಗೆಲ್ಲ ರಾಜಾರೋಷವಾಗಿ ಮುತ್ತು ಕಟ್ಟಿಸಲು ಮುಂದಾದ ಅವರ ಮನೆಯವರ ಮನಃಸ್ಥಿತಿ ಅವನಿಗೆ ಅಚ್ಚರಿ ಎನಿಸಿತಷ್ಟೆ! ಸೀರೆ ಉಟ್ಟ ರಾಘುವನ್ನ, ಅಗಸೀ ದಾಟುತ್ತಿದ್ದ ಮೆರವಣಿಗೆಯನ್ನ ನೋಡುತ್ತ ನಿಂತ ವಾದಿಗೆ ಹಳೆಯದೆಲ್ಲ ನೆನಪಾಗತೊಡಗಿತು.

ವಾದಿಯವರ ಹೊಲಕ್ಕೆ ಕಾಯಂ ಕೂಲಿ ಕೆಲಸಕ್ಕೆ ಬರುತ್ತಿದ್ದ ಮಲ್ಲವ್ವ ಯಾವಾಗಲೂ ತನ್ನ ಮಗ ರಾಘುವಿನದೆ ಗುಣಗಾನ ಮಾಡುತ್ತಿದ್ದಳು. ''ನಮ್ಮ ರಾಘಣ್ಣ ನನಗ ಮಗ ಅಲ್ಲವೋ ಮಗಳಿದ್ದಂಗ, ಎಷ್ಟು ವತನ, ಏನು ಸ್ವಚ್ಛ! ಸಾಲೀಗೋಗಿ ಬಂದು ಕಸ–ಮುಸುರೆ ಮಾಡಿ ಅನ್ನಕಿಟ್ಟರತದ ನಾ ಹೋಗಪಟೀಗಿ'' ಅಂತ ಖುಷಿಯಿಂದ ಮಲ್ಲವ್ವ ಹೇಳುತ್ತಿದ್ದಳು.

ದನದ ಕಸ ಬಳ್ಯಾದು, ಪೂರಾ ಹೊತ್ತಾದ್ರ ಮನೀ ಮುಂದ್ಲ ನಳ್ದಾಗ ಬಟ್ಯಾನು ಒಗೀತಾದ ಅಂತ ಕಕ್ಕುಲಾತಿಯಿಂದ ಆಕೆ ಹೇಳುತ್ತಿದ್ದರೆ, ಆಕೆಯ ಜೊತೆ ಗದ್ದೆಯಲ್ಲಿ ಬಗ್ಗಿ ಕೋಣಂಜಿ ಕಳೆ ತೆಗೆಯುತ್ತಿದ್ದ ಹೆಂಗಸರೆಲ್ಲ ಮೂಗು ಮುರಿದು, ''ನಮ್ಮನ್ಯಾಗೂ ಎರಡು ಮೂರು ಅದ್ಯಾವ ತುಂಬಿದ ಜರಿಗಿ ಎತ್ತಿಡಂಗಿಲ್ಲ, ಸಾಯ್ತೀವಿ ಅಂದ್ರು ಗುಟುಗು ನೀರ ಹಾಕಲಾರದವು, ನೀ ಪುಣ್ಯ ಮಾಡಿದ್ದೆವ ಮಲ್ಲವ್ವ'' ಅಂತ ಅನ್ನುತ್ತಿದ್ದರು.

ವಾದಿಗಿಂತ ಒಂದು ತರಗತಿ ಹಿಂದೆ ಇದ್ದ ರಾಘು ಸಾಲಿಯಲ್ಲಾದರೂ ಅಷ್ಟೆ! ಎಷ್ಟು ಕರೆದರೂ ಹುಡುಗರ ಜೊತೆ ಖೋ ಖೋ ಆಟಕ್ಕೆ ಬರದೆ ಸಾಲಿ ಕಟ್ಟೆಯ ಮೇಲೆ ಕುಂತು ಓಣಿ ಹುಡ್ಗೀರೊಂದಿಗೆ ಹುಲಿ–ಮನೆ ಆಟ ಆಡುತ್ತಿದ್ದ.

ಸಾಲಿ ಬಿಟ್ಟು ಬಂದ ಮೇಲೆ ಹುಡುಗರೆಲ್ಲ ಸೇರಿ ಹನುಮಂತ ದೇವರ ಗುಡಿಯ ಅಂಗಳದಲ್ಲಿ ಗೋಲಿ ಆಡುತ್ತಿದ್ದರೆ ಅವನು ಆಟದಲ್ಲಿ ಸೇರಿ ದುಂಡಗೆ ಕೊರೆದ ಗೆರೆಯೊಳಗೆ ಚೆಲ್ಲಿದ ಗೋಲಿಗಳಿಗೆ ದೊಡ್ಡ ಗೋಲಿ (ವಟ್ಟ) ತೆಗೆದುಕೊಂಡು ಹೊಡೆಯುವಾಗ ಮಾತ್ರ ಕೈಯನ್ನು ಲಾಲಿತ್ಯವಾಗಿ ಬಳುಕಿಸಿ ಪಟುಕ್ ಅಂತ ಹೊಡೆದು, ಗೋಲಿಗಳನ್ನು ಚೆಲ್ಲಾಪಿಲ್ಲಿಯಾಗಿ ಗೆರೆದಾಟಿಸುತ್ತಿದ್ದ. ಗೆದ್ದ ಗೋಲಿಗಳನ್ನ ಅವನು ಖುಷಿಯಿಂದ ಬೊಕ್ಕಣದೊಳಗೆ ಹಾಕಿಕೊಳ್ಳುತ್ತಿದ್ದರೆ ಸೋತ ಹುಡುಗರು, ''ಕೂಟ್ಯ ಸೂಳೆಮಗ ಹೆಂಗಬೇಕು ಹಂಗ ಹೊಡ್ದು ಗೆದ್ಯಾನ'' ಅಂತ ಹಂಗಿಸುತ್ತಿದ್ದರು.

ಅವರು ಹಂಗೆ ಅಂದಿದುಕ್ಕೆ ಚೂರು ಬ್ಯಾಸ್ರ ಮಾಡಿಕೊಳ್ಳದೆ ರಾಘು ಹಾಕಿದ ಚೆಡ್ಡಿಯ ಮ್ಯಾಲಿನ ನಡುವನ್ನ ಬಳಕಿಸುತ್ತ ಮನೆಕಡೆ ನಡೆಯುತ್ತಿದ್ದ.

ಅವನು ಚೂರು ದೊಡ್ಡವನಾದ ಮೇಲೆ ಸಾಲಿ ಬಿಟ್ಟ. ಹೊಸದಾಗಿ ಬಂದಿದ್ದ ಪಿ.ಟಿ. ಮಾಸ್ತರು ಉಚ್ಚೆಗೆ ಬಿಟ್ಟಾಗ ತೆಕ್ಕೆಗೆ ಬಿದ್ದುದಕ್ಕೆ ಹೆದರಿ ಸಾಲಿ ಬಿಟ್ಟ ಅಂತ ಊರಲ್ಲಿ ಗುಲ್ಲಾಯಿತು. ಅವನು ಹೂಂ ಅನಲಿಲ್ಲ, ಹೂ ಹೂಂ ಅಂತಾನೂ ಅನಲಿಲ್ಲ. ಬರೀ ಮುಖ ತಪ್ಪಿಸಿಕೊಂಡು ತಿರುಗಾಡಿದ.